SRI D. DEVARAJ URS.—I again request the hon. Members to give their suggestion if any in that matter, within a couple of days.

ಶ್ರೀ ಜಿ. ಎಲ್. ಕಬಾಡಿ.—ನಮ್ಮ ಸಲಹೆಗಳನ್ನು ಯಾವಾಗ ಕೊಡೋಣ ?

ಶ್ರೀ ಡಿ. ದೇವರಾಜ ಅರಸ್.—ನಾಳೆಯೇ ಕೊಡೀ, ಯಾವತ್ತಾದರೂ ಕೊಡಿ.

KARNATAKA WEIGHTS AND MEASURES (ENFORCEMENTS) (AMENDMENT) BILL, 1974 MOTION TO CONSIDER

MADAM SPEAKER.—I have received the recommendation of the Governor to the effect that the Karnataka Weights and Measures (Enforcement) (Amendment) Bill, 1974 be considered by the Legislative Assembly.

SRI C. N. PATIL.—(Minister for Co-operation) Madam Speaker, I beg to.....

SRI H. D. DEVEGOWDA.—I want to raise a Privilege Motion.

MADAM SPEAKER.—We will take it up tomorrow.

SRI C. N. PATIL.—Madam Speaker, I beg to move that the Karnataka Weights and Measures (Enforcement) (Amendment) Bill, 1974 be taken into consideration.

MADAM SPEAKER.—Motion moved.

"That the Karnataka Weights and Measures (Enforcement) (Amendment) Bill, 1974 be taken into consideration."

† SRI C. N. PATIL.—Madam, The Controller of Weights and Measures submitted a proposal to the Government to amend Section 15, 20 and 37 of the Mysore Weights and Measures (Enforcement) Act 1958 for the following reasons.

Section 15 of the Act does not provide for the appointment of a Joint Controller of Weights and Measures. After the appointment his functions and duties to be performed cannot be legally recognised unless there is amendment to that effect. That is why this amendment has brought before the House.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ನಾವು ಸರ್ಕಾರದ ಸಲಹೆಯನ್ನು ಚರ್ಚೆ ಮಾಡುತ್ತಾ ಇದ್ದೇವೋ ಅಥವಾ ಜಾಯಿಂಟ್ ಡೈರಕ್ಟರ್ ಆಫ್ ವೈಟ್ಸ್ ಆಂಡ್ ಮೆಷರ್ಸ್ ಬಗ್ಗೆ ಏನಾದರೂ ಚರ್ಚೆ ಮಾಡುತ್ತಾ ಇದ್ದೇವೂ ನನಗೆ ಗೊತ್ತಾಗುವುಲ್ಲ.

SRI C. N. PATIL.—Since the Joint Controller of Weigts and Measures.....

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗ ಬಿಲ್ಲಿನಲ್ಲಿರುವ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ ಆಂಡ್ ರೀಸನ್ಸ್ ಓದುತ್ತಾ ಇದ್ದಾರೆ.

ಶ್ರೀ ಸಿ. ಎನ್. ಪಾಟೀಲ್.—ಹುತ್ತೇನು ಮಾಡಬೇಕು ಹೇಳಿ.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಹೇಳಿದ ಹಾಗೆ ಮಾಡುತ್ತಾರೇನು ? ಹಾಗಾದರೆ ನೀವ ರಾಜೀನಾಮೆ ಕೊಟ್ಟು ಇಲ್ಲಿಂದ ಹೋಗಿ ಎಂದರೆ ಹೋಗುತ್ತೀರಾ ?

ಅಧ್ಯಕ್ಷರು.—ಲಿಂಗಪ್ಪನವರೇ ಈಗ ನೀವು ಏನು ಹೇಳುತ್ತಿದ್ದೀರಿ ಅದು ಸರಿಯಲ್ಲ ನಿಮಗೇನು ಬೇಕೋ ಅದನ್ನು ಸಮಂಧಾನವಾಗಿ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಈ ಬಿಲ್ಲಿನಲ್ಲಿರುವ ಸ್ಟೇಟ್‌ಮೆಂಟ್ ಆಫ್ ಆಬ್ಜಕ್ಟ್ಸ್ ಆಂಡ್ ರೀಸನ್ ಓದಬೇಕಾಗಿಲ್ಲ. That is not the way the hon. Minister should start while introducing any Bill. ದಯವಿಟ್ಟು ಅದರ ಬಗ್ಗೆ ವ್ಯಾಖ್ಯಾನ ಮಾಡಲಿ. ಓದುವುದು ಬೇಕಾಗಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಅದರಲ್ಲಿ ಇರುವುದು ಓದಬಾರದು ಎಂದು ಎಲ್ಲಿದೆ ಹೇಳಿ ? ಇನ್ನುಮೇಲೆ ತಾವೇನಾದರೂ ಒಂದು ರೂಲನ್ನು ಹೀಗೆ ಮಾಡಬೇಕು ಎಂದು ಮಾಡಿ. ಅದರಂತೆ ಏನಾದರೂ ಒಪ್ಪಿಕೊಂಡರೆ ಅದರಂತೆ ನಡೆಯೋಣ. ನಾವೂ ನೀವೂ ಕೂಡ ರೂಲು ಬಿಟ್ಟು ಹೋಗಬಾರದು.

ಶ್ರೀ ಎಸ್. ಬಂಗಾರಪ್ಪ.—ಓದಬೇಕು ಎಂದು ಎಲ್ಲಿದೆ ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ನನಗೆ ಗೊತ್ತಿದೆ. ಅವರ ಇಷ್ಟ ಇದ್ದರೆ ಓದಬಹುದು, ಓದುವುದಕ್ಕೆ ಇಷ್ಟ ಇಲ್ಲದಿದ ರೆ ಬಿಡಬಹುದು.

SRI S. BANGARAPPA.—I don't agree.

ಶ್ರೀ ಡಿ. ದೇವರಾಜ ಅರಸ್.—You hear what he says. ಹಾಗೆ ನೀವು ಹೇಳಂವುದರೆ ಈ ಬಿಲ್ಲಿನಲ್ಲಿ ಸ್ಟೇಟ್‌ಮೆಂಟ್ ಆಫ್ ಆಬ ಕ್ಟ್ ಆಂಡ್ ರೀಸನ್ಸ್ ಇದೆ, ಮತ್ತು ಆದರೊಳಗೆ ಸೆಕ್ಷನ್ ಕೂಡ ಇದೆ. ಅದನ್ನು ಏತಕ್ಕೆ ಓದಬೇಕು ಎಂದು ಕೇಳಿದರೆ ನನಗೆ ಅರ್ಥವಾಗಂವುದಿಲ್ಲ. ಅದನ್ನು ನೋಡಿಕೊಂಡು ಇದು ನಮಗೆ ಗೊತ್ತಿದೆ ಇನ್ನೇನಾದರೂ ಇದ್ದರೆ ಹೇಳಿ ಎಂದು ಕೇಳಿದರೆ ಪರವಾಯಿಲ್ಲ. Still, if he wants to read how can any boby object it ? You may say that you know it. ಅಂತ ಹೇಳುವುದನ್ನು ಬಿಟ್ಟು ಬಿಲ್ಲಿನ ಮೇಲೆ ಇರುವುದನ್ನು ವ್ಯಾಖ್ಯಾನ ಮಾಡಬೇಡಿ ಇದನ್ನು ಓದಬೇಡಿ ಎಂದು ಹೇಳಿದರೆ ಕಾನೂನಿಗೆ ವಿರುದ್ಧವಾಗಿ ಹೇಳಿದಂತಾಗುತ್ತದೆ.

ಶ್ರೀ ಸಿ. ಎನ್. ಪಾಟೀಲ್ —ಈ ಬಿಲ್ ತಂದಿರುವ ಉದ್ದೇಶ ಏನೆಂದರೆ ಈ ಬಿಲ್ಲಿನ ೧೫ನೇ ಸೆಕ್ಷನ್‌ಲ್ಲಿ ಜಾಯಿಂಟ್ ಕಂಟ್ರೋಲರ್ ಆಫ್ ವೈಟ್ಸ್ ಅಂಡ್ ವೆಷರ್ಸ್ ಅನ್ನುವ ಪೋಸ್ಟ್‌ನ್ನು ಕ್ರಿಯೇಟ್ ಮಾಡಿದ್ದೇವೆ. ಮತ್ತು ಆ ಪೋಸ್ಟ್ ಕ್ರಿಯೇಟ್ ಮಾಡಿದ ನಂತರ ಅವರಿಗೆ ಡ್ಯೂಟೀಸ್ ಪರ್‌ಫಾರಂ ಮಾಡಬೇಕಾದರೆ ಈ ೧೫ನೇ ಸೆಕ್ಷನ್‌ಗೆ ಒಂದು ಅಮೆಂಡ್‌ಮಂಟನ್ನು ತಿದ್ದುಪಡಿ ಮಾಡಬೇಕಾಗುತ್ತದೆ.

ಇನ್ನು ೨೦ನೇ ಸೆಕ್ಷನ್‌ನಲ್ಲಿ ಕೆಲವು ಅಪಲೇಟ್ ಪವರ್ಸ್‌ನ್ನು ಅವರಿಗೆ ಎಂಟರೆಸ್ಟ್ ಮಾಡಬೇಕಾದರೆ ಅದಕ್ಕೆ ಒಂದು ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಇನ್ನು ಸೆಕ್ಷನ್ ೩೭ರಲ್ಲಿ ಈರೀತಿ ಇದೆ:—

No Court shall take cognizance of an offence punishable under this Act except upon a complaint in writing made by the Controller or any officer authorised in this behalf by the Controller by general or special order ''

ಶ್ರೀ ಎಸ್. ಬಂಗಾರಪ್ಪ.—ಪುನಃ ಪುನಃ ಮಧ್ಯ ಪ್ರವೇಶ ಮಾಡಂವುದಕ್ಕೆ ಕ್ಷಮಿಸಬೇಕು. ಮಾನ್ಯ ಸಚಿವರು ಏನು ತಿದ್ದುಪಡಿ ಮಸೂದೆಯನ್ನು ಈ ಸದನದ ಒಪ್ಪಿಗೆಗಾಗಿ ಇಡುವುದಕ್ಕೆ ಇಂಗ್ಲಿಷಿನಲ್ಲಿ ಏನು ಇತ್ತು ಅದನ್ನು ಕನ್ನಡದಲ್ಲಿ ತರ್ಜುಮೆಮಾಡಿ ಹೇಳಿದರು. ಅದು ತಮಗೂ ಗೊತ್ತಿದೆ ಅಧ್ಯಕ್ಷರೇ. ಉದಾಹರಣೆಗೆ ಹೇಳುವುದಾದರೆ ಸೆಕ್ಷನ್ ೩೭ ಅಥವಾ ೨೭ ಇತರೆ ಯಾವುದೇ ಒರಿಜನಲ್ ಸೆಕ್ಷನನ್ನು ತಿದ್ದುಪಡಿ ಮಾಡಬೇಕಾದರೆ ಆ ಮಸೂದೆಯನ್ನು ತರುವುದಕ್ಕೆ ಏತಕ್ಕೋಸ್ಕರ ಈ ಮಸೂದೆಯನ್ನು ತಿದು ಪಡಿ ಮಾಡಬೇಕು ಎನ್ನುವುದು ಮಂತ್ರಿಗಳ ಬಾಯಿಂದ ಬಂದಿಲ್ಲ. ಅದನ್ನು ಮಂತ್ರಿಗಳು ಹೇಳಂವುದಕ್ಕೆ ಆಗುತ್ತದೋ ಇಲ್ಲವೋ ತಿಳಿಸಲಿ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಮನಸ್ಸಿನಲ್ಲಿ ಆಗಿರುವ ಆತಂಕ ವೇನೆಂದರೆ ಯಾವುದೇ ಮಸೂದೆಯನ್ನು ತಿದ್ದುಪಡಿ ಮಾಡಬೇಕೆಂದು ಚರ್ಚೆಗೆ ಬಂದಾಗ ಸಂಬಂಧಪಟ್ಟ ಮಂತ್ರಿಗಳು ನಂತರ ಇರುವ ಕೆಲವು ಸಮಸ್ಯೆಗಳನ್ನು ಮತ್ತು ಅನುಮಾನಗಳನ್ನು ನಿವಾರಣೆಮಾಡಿಕೊಡ ಬೇಕೆಂದು ಮಾನ್ಯ ಸರ್ಕಾರವನ್ನು ಕೇಳಿಕೊಳ್ಳುತ್ತೇವೆ. ಈಗಿರತಕ್ಕಂಥ ಮಸೂದೆಯನ್ನು ತಿದ್ದುಪಡಿ ಮಾಡಲು ಅಂಥ ಪ್ರಬಲವಾದ ಕಾರಣವಾದರೂ ಏನು ? ಈಗ ಇರತಕ್ಕಂಥ ಡೆಪ್ಯುಟಿ ಕಂಟ್ರೋಲರ್ ಅವರ ಜಾಗಕ್ಕೆ ಒಬ್ಬ ಜಾಯಿಂಟ್ ಕಂಟ್ರೋಲರ್‌ನ್ನು ನೇಮಕ ಮಾಡಬೇಕೆಂದು ತಾವು ತಿದ್ದುಪಡಿ ಮಾಡ ಬೇಕೆಂದು ಈ ಮಸೂದೆಗೆ ತಿದ್ದುಪಡಿ ಮಾಡುವುದಕ್ಕೆ ತಂದಿದ್ದೀರಿ. ಅಂಥ ಒಂದು ಸನ್ನಿವೇಶ ಒದಗಿರುವು ದಕ್ಕೆ ಕಾರಣವನ್ನು ಸೂಕ್ಷ್ಮವಾಗಿ ಪರಿಚಯಮಾಡಿ ಕೊಡಬೇಕು.

ಶ್ರೀ ಸಿ. ಎನ್. ಪಾಟೀಲ್.—ಈ ಡೆಪ್ಯುಟಿ ಕಂಟ್ರೋಲರ್ ಏನು ಕೆಲಸಕಾರ್ಯಗಳನ್ನು ನಿರ್ವಹಿ ಸುತ್ತಿದ್ದಾರೆ ಅದು ಅವರಿಗೆ ಜಾಸ್ತಿಯಾಗಿರುವುದರಿಂದ ಒಂದು ಜಾಯಿಂಟ್ ಕಂಟ್ರೋಲರ್ ಪೋಸ್ಟ್‌ನ್ನು ಕ್ರಿಯೇಟ್ ಮಾಡಿ ಅವರಿಗೆ ಡ್ಯೂಟೀಸ್ ಮತ್ತು ರೆಸ್‌ಪಾನ್ಸಿಬಿಲಿಟೀಸ್‌ಅನ್ನು ಜಾಸ್ತಿ ಮಹಿಸಿ ಕೆಲಸಕಾರ್ಯ ಗಳು ಇನ್ನೂತ್ವರಿತವಾಗಿ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಮತ್ತೊಂದು ಪೋಸ್ಟ್ ಕ್ರಿಯೇಟ್ ಮಾಡಬೇಕಾಗಿದೆ. ಇದರಲ್ಲಿ ಮತ್ತೇನು ವಿಶೇಷವಾದದ್ದು ಇದೆ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಾವು ದಯಮಾಡಿ ಕ್ಷಮಿಸಬೇಕು. ಮಾನ್ಯ ಸಚಿವರು ಒಂದು ಹೊಸ ಹುದ್ದೆಯನ್ನು ನಿರ್ಮಾಣ ಮಾಡಲು ಹೋದರೆ ಅದರ ಮೇಲೆ ಫೈನಾನ್ ಷಿಯಲ್ ಇಂಪ್ಲಿಕೇಷನ್ ಏನು ಆಗುತ್ತದೆ. ಈ ಅಮೆಂಟ್‌ಮೆಂಟ್‌ನಿಂದ ಎಂದರೆ ೧೫ ಸಾವಿರ ರೂಪಾಯಿ ಜಾಸ್ತಿ ಖರ್ಚು ಬರುತ್ತದೆ.

ಶ್ರೀ ಸಿ. ಎನ್. ಪಾಟೀಲ್.—ಈ ಒಂದು ಹೊಸ ಹುದ್ದೆಯನ್ನು ನಿರ್ಮಾಣ ಮಾಡುವುದರಿಂದ ವರ್ಷಕ್ಕೆ ೧೫ ಸಾವಿರ ರೂಪಾಯಿ ಖರ್ಚು ಬರುತ್ತದೆ. ಈಗ ಇರುವ ಡೆಪ್ಯುಟಿ ಕಂಟ್ರೋಲರ್ ಪೋಸ್ಟ್ ಅನ್ನು ಜಾಯಿಂಟ್ ಕಂಟ್ರೋಲರ್ ಮಾಡುವುದರಿಂದ ಅಡಿಷನಲ್ ಎಕ್ಸ್‌ಪೆಂಡಿಚರ್ ಏನೂ ಜಾಸ್ತಿ ಬರುವು ದಿಲ್ಲ.

ಶ್ರೀ ಎಸ್. ಬಂಗಾರಪ್ಪ.—೧೫ ಸಾವಿರ ರೂಪಾಯಿ ಖರ್ಚು ಎಂದರೆ ಅದು ಕಮ್ಮಿ ಇಲ್ಲ. ಈಗ ಇರುವ ಹಣದ ಮಂಗ್ಗಟ್ಟಿನಲ್ಲಿ ಅದು ಸರ್ಕಾರಕ್ಕೆ ಒಂದು ದೊಡ್ಡ ಭಾರವೇ.

ಅಧ್ಯಕ್ಷರು.—ಶ್ರೀ ಬಂಗಾರಪ್ಪನವರೇ, ನೀವು ಮಾತನಾಡುವುದಾದರೆ ಅದರಮೇಲೆ ಮಾತನಾಡಿ.

ಶ್ರೀ ಎನ್. ಬಂಗಾರಪ್ಪ.—ನಾನು ಮಾತನಾಡುವುದಿಲ್ಲ.

ಶ್ರೀ ಸಿ. ಎಸ್. ಪಾಟೀಲ್.—ನಾವು ಜಾಯಿಂಟ್ ಕಂಟ್ರೋಲರ್ ಹುದ್ದೆಯನ್ನು ನಿರ್ಮಾಣ ಮಾಡ ಬೇಕಾಗುತ್ತದೆ ಅದಕ್ಕೋಸ್ಕರ ಈ ಅಮೆಂಡ್‌ಮೆಂಟನ್ನು ತಂದಿರುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ಮಂಡಿಸಿರತಕ್ಕ ಈ ಮಸೂದೆಯನ್ನು ನಾನು ತೀವ್ರವಾಗಿ ವಿರೋಧಿಸಬೇಕಾಗಿದೆ. ಸರ್ಕಾರದ ಈ ದ್ವಂದ್ವ ನೀತಿಯನ್ನು ಕಟುವಾಗಿ ಟೀಕಿಸಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಅಕಸ್ಮಾತ್ತಾಗಿ ಇಲ್ಲಿಯೇ ಇದ್ದಾರೆ. ಆದುದರಿಂದ ನಾನು ಈ ಸನ್ನಿವೇಶದಲ್ಲಿ ಈ ಮಸೂದೆಯ ಮುಖಾಂತರ ಒಂದು ಮಸೂದೆಗೆ ಏನು ತಿದ್ದುಪಡಿ ಮಾಡಲು ಹೊರಟಿದ್ದಾರೆ ಅದಕ್ಕೆ ಎಷ್ಟು ಎಕ್ಸ್‌ಪೆಂಡಿಚರ್ ಮಾಡಲು ಸರ್ಕಾರ ಪ್ರಯತ್ನಪಟ್ಟಿದೆ ಎಂದರೆ ಒಂದು ವರ್ಷಕ್ಕೆ ೧೫ ಸಾವಿರ ರೂಪಾಯಿ ಹೆಚ್ಚಿನ ಭಾರ ಬರುತ್ತದೆ ಎಂದು ತಿಳಿಸಿದ್ದಾರೆ. ಈಗ ಸರ್ಕಾರ ಏನು ಹಣಕಾಸಿನ ಬಿಕ್ಕಟ್ಟಿನಿಂದ ಮುಗ್ಗರಿಸಿ ಬಿದ್ದಿದೆ. ಇದರ ಬಗ್ಗೆ ದೇಶದ ಜನತೆ ಏನು ಹೇಳಿದ್ದಾರೆ ಜೊತೆಗೆ ನಾವೂ ಹೇಳುತ್ತಾ ಇದ್ದೇವೆ ಜೊತೆಗೆ ಸರ್ಕಾರದವರೂ ಹೇಳುತ್ತಾ ಬಂದಿದ್ದಾರೆ. ಇಂಥ ಭೀಕರ ವಾದ ಸನ್ನಿವೇಶದಲ್ಲಿರುವಾಗ ಸರ್ಕಾರ ಹಣಕಾಸಿನ ಹಿತದೃಷ್ಟಿಯಿಂದ ಎಲ್ಲಾ ಕ್ಷೇತ್ರಗಳಲ್ಲಿಯೂ ಮಿತವ್ಯ ಯದೃಷ್ಟಿಯಿಂದ ಬಹಳ ತ್ವರಿತವಾಗಿ ಮಾಡಲೇಕಬೇಕಾದ ಕೆಲಸಕಾರ್ಯಗಳನ್ನು ಕೂಡ ನಿಲ್ಲಿಸಿದ್ದಾರೆ. ಇನ್ನು ಅತಿಜರೂರಾಗಿ ಮಾಡಲೇ ಬೇಕಾದ ಕೆಲಸಕಾರ್ಯಗಳನ್ನು ಸಹಿತ ೫೦ ಪರ್ಸೆಂಟ್ ಭಾಗದ ಕೆಲಸಗಳನ್ನು ನಿಲ್ಲಿಸಿದ್ದಾರೆ. ಸರ್ಕಾರ ಜನರಿಗೆ ಗೌರವದಿಂದ ಜೀವನಮಾಡಲು ಕೆಲಸಕಾರ್ಯಗಳನ್ನು ಕೊಟ್ಟು ಸರ್ಕಾರ ನಡೆಸುವುದಕ್ಕೆ ಸಾಧ್ಯವಿಲ್ಲದ ಈ ಸಂದರ್ಭದಲ್ಲಿ ಡೆಪ್ಯುಟಿ ಕಂಟ್ರೋಲರ್ ಬದಲಿಗೆ ಜಾಯಿಂಟ್ ಕಂಟ್ರೋಲರ್ ಹುದ್ದೆಯನ್ನು ನಿರ್ಮಾಣಮಾಡುವ ಆವಶ್ಯಕತೆ ಏನು ಇದೆಯೆಂದು ಕೇಳುತ್ತೇನೆ. ಯಾವುದೇ ಕಚೇರಿಯಲ್ಲಿ ಇರತಕ್ಕಂಥ ಜನರಿಗೆ ಸರಿಯಾಗಿ ಕೆಲಸ ಮಾಡಿದರೆ ಅವರಿಗೇ ಕೆಲಸವಿಲ್ಲ. ಅಂಥಹ ಸಂದರ್ಭದಲ್ಲಿ

(ಶ್ರೀ ಕಾಗೋಡು ತಿಮ್ಮಪ್ಪ)

ಹೊಸ ಹುದ್ದೆಯನ್ನು ನಿರ್ಮಾಣಮಾಡುವುದಕ್ಕೆ ಹೊರಟಿದ್ದೀರಾ ? ಅಧ್ಯಕ್ಷರೇ, ತಮಗೆ ಸಮಯ ಸಿಕ್ಕಿದಾಗ ನಮ್ಮ ಸರ್ಕಾರೀ ಕಚೇರಿಗಳಿಗೆ ಬೇಟಿಕೊಟ್ಟು ಎಷ್ಟು ಜನ ೮ ಗಂಟೆಗಳ ಕಾಲ ಕೆಲಸಮಾಡುತ್ತಾರೆಂದು ನೋಡಿ ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರು ನೌಕರರು ಸರಿಯಾಗಿ ಕೆಲಸಮಾಡುವುದಿಲ್ಲವೆಂದು ಅವರು ಏನು ಒಪ್ಪಿಕೊಂಡಿದ್ದಾರೆ ಅದಕ್ಕೆ ನಾನು ಕೆಲವು ಸಮಯ ಬರುತ್ತದೆ ಆಗ ಮಾನ್ಯ ಸ್ನೇಹಿತರನು ಕೇಳುತ್ತೇನೆ. ಆಗ ಅವರು ಏನು ಮಾತನಾಡುತ್ತಾರೆ ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಕನಿಷ್ಪಪಕ್ಷ ಯಾವಾಗ ತಮಗೆ ಸಮಯ ಸಿಕ್ಕುತ್ತೆ ಆಗ ಒಂದು ಸಾರಿ ಕಚೇರಿಗಳಲ್ಲಿ ನೌಕರರು ಕೆಲಸಮಾಡುವುದನ್ನು ನೋಡಬೇಕು ಎಂದು ಹೇಳುತ್ತೇನೆ. ಜನಗಳಿಗೆ ಸರ್ಕಾರದ ಕೆಲಸಮಾಡುವಾಗ ಏನು ಅಂಧಶ್ರದ್ಧೆಯಿಟ್ಟು ಕೆಲಸಮಾಡುತ್ತಾರೆ ಎಂಬುದನ್ನು ನೋಡಿದರೆ ಈ ಜಾಯಿಂಟ್ ಕಂಟ್ರೋಲರ್ ಕ್ಲೆಸ ಏನು ಇದೆ ಅದನ್ನು ಡೆಪ್ಯುಟಿ ಕಂಟ್ರೋಲರ್ ನಿರ್ವಹಿಸುವುದಕ್ಕೆ ಸಾಧ್ಯವಿಲ್ಲವೇ ? ತಮಗೆ ಗೊತ್ತಾಗುತ್ತದೆ ಡೆಪ್ಯುಟಿ ಕಂಟ್ರೋಲರ್ ಮುಖಾಂತರವೇ ಈ ಹೆಚ್ಚಿನ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿದೆ ಎಂಬುದು ತಮಗೂ ಮತ್ತು ಸರ್ಕಾರಕ್ಕೂ ಗೊತ್ತಾಗುತ್ತದೆ. ಸರಿಯಾಗಿ ಕೆಲಸ ಮಾಡುವ ನೌಕರರಿಗೆ ಸಂಬಳ ಕೊಡುವುದರಿಂದ ತೊಂದರೆ ಇಲ್ಲ. ೧೯೭೧ ರಲ್ಲಿ ಒಂದು ಪೇ ಕಮಿಷನ್ ಆಯಿತು ಈಗ ೧೯೭೪ ರಲ್ಲಿ ಒಂದು ಕಮಿಷನ್ ರಚಿತವಾಗುತ್ತಿದೆ. ಇವೊತ್ತು ಕಚೇರಿಯಲ್ಲಿ ಯಾವರೀತಿ ಕೆಲಸಕಾರ್ಯ ನಡೆಯುತ್ತಿದೆ ಎಂಬುದನ್ನು ನೋಡಿ. ಸರ್ಕಾರದಲ್ಲಿ ಹಣವಿಲ್ಲ ಅಂಥಾದ್ದರಲ್ಲಿ ಹೊಸ ಹುದ್ದೆಯನ್ನು ನಿರ್ಮಾಣ ಮಾಡುವುದಕ್ಕೆ ಹೊರಟಿದ್ದೀರಿ ? ಈಗ ಇರುವವರಲ್ಲೇ ಸರಿಯಾದ ರೀತಿಯಲ್ಲಿ ಕೆಲಸ ತೆಗೆದು ಕೊಂಡರೆ ಮತ್ತೆ ಹೊಸ ಹುದ್ದೆಯನ್ನು ನಿರ್ಮಾಣ ಮಾಡುವ ಪ್ರಮೇಯವೇ ಬರುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ದಯವಾಡಿ ಮಾನ್ಯ ಸರ್ಕಾರದವರು ಏನು ಹೊಸ ಹೊದ್ದೆಯನ್ನೂ ನಿರ್ಮಾಣ ಮಾಡಲು ಹೊರಟಿದ್ದಾರೋ ಅದನ್ನು ದಯವಾಡಿ ನಿಲ್ಲಿಸಿ ಡೆಪ್ಯುಟಿ ಕಂಟ್ರೋಲರ್ ಏನು ಇದಾರೆ ಅವರಿಂದ ಈ ಕೆಲಸಕಾರ್ಯವನ್ನೂ ನಿರ್ವಹಿಸಲು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

3-30 P.M.

ಇದರ ಬಗ್ಗೆ ತಾವು ಏನನ್ನೂ ಹೇಳಲಿಲ್ಲ. ಯಾರೋ ಹೇಳುತ್ತಾರೆಂದು ಒಂದು ಹೊಸ ಹುದ್ದೆಯನ್ನು ಮಾಡುವುದಕ್ಕೆ ಸಚಿವರು ದಯವಿಟ್ಟು ಒಪ್ಪಿಕೊಳ್ಳ ಬಾರದು. ತಮ್ಮ ಇಲಾಖೆಯಲ್ಲಿ ಅಧಿಕಾರಿಗಳ ವರ್ಗ ಸಾಕಾದಷ್ಟು ಇದೆ. ಇದರಿಂದಲೇ ಹೆಚ್ಚಾದಂಥ ತಮ್ಮ ಕೆಲಸವನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಇನ್ನೂ ಹತ್ತು ವರ್ಷದವರೆಗೂ ಹೆಚ್ಚಾಗತಕ್ಕ ಕೆಲಸವನ್ನು ಇವರಿಂದ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಆಳತೆ ಮತ್ತು ತೂಕದ ಇಲಾಖೆ, ಇದು ಒಂದು ಸಣ್ಣ ಇಲಾಖೆ. ಅನೆಯನ್ನು ನುಂಗತಕ್ಕ ಸರಕಾರ ಇಲಾಖೆ ಇದಲ್ಲ. ಇದರ ಕಾರ್ಯಭಾರ ಮೇಲ್ವಿಚಾರಣೆ. ಇಡೀ ರಾಜ್ಯದಲ್ಲಿ ಈ ಇಲಾಖೆಯವರು, ತೂಕ ಮತ್ತು ಅಳತೆಯ ವಿಚಾರದಲ್ಲಿ ತಪ್ಪು ಮಾಡಿದವರು ಮೇಲೆ ಕೇಸ್ ಹಾಕಿರತಕ್ಕದ್ದು ಶಿಕ್ಷೆ ಮಾಡಿರತಕ್ಕದ್ದು ಬಹಳ ಕಡಿಮೆ. ಹಳ್ಳಿಗಳಲ್ಲಿ ಇವತ್ತಿಗೂ ಕೂಡ ಶೆಟ್ಟಿರುಗಳು ಹಳೆಯ ಶೇರು ಗಳನ್ನು ಇಟ್ಟುಕೊಂಡು ಕೆಲಸಗಳನ್ನು ಮಾಡುತ್ತಿದ್ದಾರೆ. ತಾವು ಹೇಳುವ ರೀತಿಯಲ್ಲಿ ಇಲಾಖೆಯಲ್ಲಿ ಕೆಲಸದ ಹೊರೆ ಅಷ್ಟು ಜಾಸ್ತಿಯಾಗಿಲ್ಲ ಆದರೆ ತಮ್ಮ ಇಲಾಖೆಯಲ್ಲಿ ಕಾರ್ಯದಕ್ಷತೆ ಎನ್ನತಕ್ಕ ಪದ ಬೆಳೆದೇ ಇಲ್ಲ ಆದರಿಂದ ಇರತಕ್ಕ ಜನರನ್ನೇ ಉಪಯೋಗಿಸಿಕೊಂಡು ಕೆಲಸ ಮಾಡುವುದಕ್ಕೆ ಆಗಿಲ್ಲವೇ ವಿನಹ, ಕೆಲಸದ ಹೊರೆ ಜಾಸ್ತಿಯಾಗಿಲ್ಲ. ಇದರಿಂದ ನೀವು ನಿರೀಕ್ಷಣೆ ಮಾಡಿದಂತೆ ಕೆಲಸ ಮಾಡುವುದಕ್ಕೆ ಆಗದೆ, ಸರ್ಕಾರದ ಬೊಕ್ಕಸಕ್ಕೆ ೧೫ ಸಾವಿರ ರೂಪಾಯಿಗಳ ಖರ್ಚು ಬೀಳುತ್ತಿದೆ. ಈಗ ಇದು ೧೫ ಸಾವಿರ ರೂಪಾಯಿಗಳು ಆಗಬಹುದು, ಮುಂದೆ ಇದು ಇದರ ಎರಡರಷ್ಟು ಆಗುತ್ತದೆ ಆದ್ದರಿಂದ ನಾನು ಹೇಳುತ್ತೇನೆ ; ಈ ಜಾಯಿಂಟ್ ಕಂಟ್ರೋಲರ್ ಹುದ್ದೆಯನ್ನ ನಿರ್ಮಾಣ ಮಾಡುತಕ್ಕದ್ದು ಅನಾವಶ್ಯಕ ಎಂದು. ಇದನ್ನು ದಯವಿಟ್ಟು ಕೈಬಿಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಮಾನ್ಯ ಸಚಿವರು ಈ ಬಿಲ್ಲಿಗೆ ಸಂಬಂಧಪಟ್ಟ ವಿಷಯಗಳನ್ನು ಹೇಳಿದ್ದಾರೆ. ಇದರಲ್ಲಿ ಕೆಲವು ಕಾನ್ಸಿಕ್ವೆನ್ಷಿಯಲ್ ಜೇಂಜಸ್ ಇದೆ. ಹೊಸದಂ ಏನೂಇಲ್ಲ, ಈಗಿರುವ ಡೆಪ್ಯೂಟಿ ಕಂಟ್ರೋಲರ್ ಹುದ್ದೆಯನ್ನು ಇಟ್ಟುಕೊಂಡು ಮತ್ತೆ ಜಾಯಿಂಟ್ ಕಂಟ್ರೋಲರ್ ಹುದ್ದೆಯನ್ನು ಮಾಡಬೇಕಾದಂಥ ಅವಶ್ಯಕತೆ ಏನೂ ಇಲ್ಲ, ಎಲ್ಲದಕ್ಕಿಂತ ಹೆಚ್ಚಾಗಿ, ತಾವು ಹಣಕಾಸಿನ ದೃಷ್ಟಿಯನ್ನು ನೋಡ ಬೇಕಾಗಿದೆ.

ಮಂಟ್ಟಿದ್ದಕ್ಕೆಲ್ಲಾ ಕಾರ್ಪೊರೇಷನ್, ಬೋರ್ಡುಗಳನ್ನು ಮಾಡುವದಕ್ಕೆ ಶುರು ಮಾಡಿದ್ದಾರೆ. ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಆಗಲೇ ಇರುವಾಗ ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ. ಪ್ರಾಣಿಗಳನ್ನು ಸಾಕುವುದಕ್ಕೂ ಒಂದು ಬೋರ್ಡು ಆಗಿದೆ ಹಣ ಇಲ್ಲದೆ, ಒದ್ದಾಡುತ್ತಾ ಇರುವಾಗ ಇಂಥ ಬೋರ್ಡುಗಳ, ಕಾರ್ಪೊರೇಷನ್‌ಗಳನ್ನು ಮಾಡುವುದು ಏಕೆ. ಮುಖ್ಯಮಂತ್ರಿಗಳು ಮೊನ್ನೆದಿವಸ ಭಾಷಣ ಮಾಡುತ್ತಾ, ಎಲ್ಲಾ ನಮ್ಮ ಶಕ್ತಿಯನ್ನು ಉತ್ಪಾದನಾ ಕ್ಷೇತ್ರದಲ್ಲಿ ತೊಡಗಿಸಿ ಸೂಣ ಎಂದು ಹೇಳಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಇವೆಲ್ಲಾ ಉತ್ಪಾದನಾ ಕ್ಷೇತ್ರಗಳೇ.

ಶ್ರೀ ಕಾಗೋಡು ತಿಮ್ಮಪ್ಪ.—ಆಹಾರ ಉತ್ಪಾದನಾ ಕ್ಷೇತ್ರದಲ್ಲಿ ನಮ್ಮ ಶಕ್ತಿಯನ್ನು ತೊಡಗಿಸೂಣ ಎಂದು ಹೇಳಿದರು. ಆದರೆ ಅಲ್ಲಿ ನಡೆಯುತ್ತಾ ಇರುವುದೇ ಒಂದು. ಬಾವಿತೋಡುವುದಕ್ಕೆ ದುಡ್ಡು ಇಲ್ಲ, ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೂ ದುಡ್ಡು ಇಲ್ಲ, ರೈತ ಕೆಲಸ ಮಾಡುವುದಕ್ಕೂ ದುಡ್ಡು ಇಲ್ಲ. ಕಬಿನಿ ಪ್ರಾಜೆಕ್ಟಿನ ಕಾಲುವೆ ಮಾಡುವುದಕ್ಕೆ ದುಡ್ಡು ಇಲ್ಲದೆ ನೀರು ಕೊಳೆಯುತ್ತಾ ಇದೆಯೆಂದು ಮುಖ್ಯಮಂತ್ರಿಗಳು ಹೇಳುತ್ತಿದ್ದರು. ಮಲಪ್ರಭಾ ಎಡದಂಡೆಯ ಕಾಲುವೆಯನ್ನು ತೆಗೆದು, ಅಲ್ಲಿ ಕರೀ ಮಣ್ಣಿನ ಪ್ರದೇಶವಾದ್ದರಿಂದ ನೀರನ್ನು ತೆಗೆದುಕೊಳ್ಳುವವರೇ ಇಲ್ಲ. ಅದಕ್ಕಿಂತ ಎಡದಂಡೆಯ ಕಾಲುವೆಯನ್ನು ತೆಗೆದು ಪೂರೈಸಿದ್ದರೆ ಕೆಂಪು ಮಣ್ಣಿನ ಪ್ರದೇಶದ ಜನರು ನೀರನ್ನು ಉಪಯೋಗಿಸಿಕೊಂಡು ಸಮೃದ್ಧಿಯಾಗಿ ಬೆಳೆಯನ್ನು ಬೆಳೆಯುತ್ತಿದ್ದರು. ನಮ್ಮ ಶಕ್ತಿಯನ್ನು ಯಾವ ಕಡೆ ವಿನಿಯೋಗಿಸಬೇಕೋ ಅಂಥ ಕಡೆ ವಿನಿಯೋಗಿಸದೆ ಇಂಥ ಹುದ್ದೆಗಳನ್ನು ಮಾಡುವುದಕ್ಕೆ ಆಸಕ್ತಿ ವಹಿಸಿದರೆ ತಾವು ಹೇಳಿದ್ದು ಒಂದು ಮಾಡುವುದು ಒಂದು ಎಂದು ಗೊತ್ತಾಗುತ್ತದೆ ಹಣಕಾಸಿನ ದುಸ್ಥಿತಿಯಲ್ಲಿ ನಮ್ಮ ಎಲ್ಲಾ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸಬೇಕಾಗಿದೆ. ಕಾಳೀ ಪ್ರಾಜೆಕ್ಟಿಗೆ I will steal or borrow and I will Complete Kali Project ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಮಾನ್ಯ ಕೃಷ್ಣ ಅವರು ಅಯ್ಯೋ ಅದೆಲ್ಲಾ ಸಾಧ್ಯವಾಗುತ್ತದೆಯೇ ಎಂದು ಹೇಳುತ್ತಾರೆ. ಅದು ಒಂದು ದೊಡ್ಡ ಕಥೆಯಾಗಿದೆ. ಇವತ್ತು ಹಣಕಾಸಿನ ದೃಷ್ಟಿಯಿಂದ, ಹೆಚ್ಚು ಹೆಚ್ಚು ಉಳಿತಾಯ ಮಾಡತಕ್ಕ ಕೆಲಸಗಳನ್ನು ಮಾಡದೇ ಹೋದರೆ, ನೀವು ಹೇಳತಕ್ಕದ್ದಕ್ಕೆ ಏನೂ ಅರ್ಥವಿಲ್ಲ. ಈ ದೃಷ್ಟಿಯಿಂದ, ಈ ತಿದ್ದುಪಡಿಯನ್ನು ತಾವು ವಾಪಸ್ ತೆಗೆದುಕೊಳ್ಳಬೇಕು ಎಂದು ನಾನು ಮಾನ್ಯ ಸಚಿವರಿಗೆ ತಮ್ಮ ಮಂಖಾಂತರ ಒತ್ತಾಯಪಡಿಸಿ, ಈ ಮಸೂದೆಯನ್ನು ವಿರೋಧ ಮಾಡಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ, ಎಂ. ಮಂಜುನಾಥ್ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸಹಕಾರ ಮಂತ್ರಿಗಳು ತಂದಿರತಕ್ಕ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಮಂತ್ರಿಗಳು ತೂಕ ಮತ್ತು ಅಳತೆ ಇಲಾಖೆಯಲ್ಲಿ ಒಂದು ಜಾಯಿಂಟ್ ಕಂಟ್ರೊಲರ್ ಹುದ್ದೆಯನ್ನು ನಿರ್ಮಾಣ ಮಾಡಿ ಅಲ್ಲಿರತಕ್ಕ ಅಧಿಕಾರಿಗಳ ಮನಸನ್ನು ಒಲಿಸಬೇಕೋ ಏನೋ ಇದನ್ನು ತಂದಿದ್ದಾರೆ. ಇದರಿಂದ ಸರ್ಕಾರಕ್ಕೆ ೫೫ ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ಅಧಿಕಾರಿಗಳ ಮನಸನ್ನು ಇವರು ತೃಪ್ತಿಪಡಿಸಬೇಕು ಎನ್ನುವುದಾದರೆ ಅದನ್ನು ನಾವು ತಪ್ಪಿಸುವುದಕ್ಕಾಗುವುದಿಲ್ಲ. ಈ ಹುದ್ದೆಯಿಂದ ಇಲಾಖೆಗೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆ, ಅಥವಾ ಇವರಿಂದ ಸಾರ್ವಜನಿಕರಿಗೆ ಎಷ್ಟರಮಟ್ಟಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ನಾವು ನೋಡಬೇಕಾಗಿದೆ. ಏಕೆಂದರೆ ಮೊದಲು ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟೆಸ್ ಒಬ್ಬರೇ ಒಬ್ಬರು ಮೂರು ಇಲಾಖೆಯನ್ನು ನೋಡಿಕೊಳ್ಳುತ್ತಿದ್ದರು. ಕೋ-ಆಪರೇಟೀವ್ ಸೊಸೈಟೀಸ್, ಮಾರ್ಕೆಟಿಂಗ್ ಯೂನಿಟ್, ವೇಟ್ ಮತ್ತು ಮೆಷರ್ಸ್. ಈ ಇಲಾಖೆಗಳನ್ನು ಬೇರ್ಪಡಿಸಿ, ಮಾರ್ಕೆಟಿಂಗ್ ಸೆಕ್ಷನ್ ಅನ್ನು ಬೇರೆ ಮಾಡಿ, ಅಳತೆ ಮತ್ತು ತೂಕದ ಇಲಾಖೆ ಎಂದು ಮಾಡಿದ್ದಾರೆ. ಈ ಇಲಾಖೆ ಎಷ್ಟರಮಟ್ಟಿಗೆ ಕೆಲಸಕಾರ್ಯಗಳನ್ನು ಮಾಡುತ್ತಿದೆ ಎನ್ನತಕ್ಕದನ್ನು ವಿಚಾರ ಮಾಡಿದರೆ, ಈ ಇಲಾಖೆ ಇರತಕ್ಕದ್ದೇ ವ್ಯರ್ಥ ಎನ್ನುವುದನ್ನು ನಾನು ಹೇಳಬಯಸುತ್ತೇನೆ.

ಈ ಇಲಾಖೆಯವರು ಒಂದು ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ. ಈ ಒಂದು ಕಾರ್ಯಕ್ರಮ ಕೆಳ ಮಟ್ಟದಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ, ಜನತೆಗೆ ನ್ಯಾಯವಾದಂಥ ತೂಕ ದೊರೆಯುತ್ತದೆಯೇ, ಕೊಡತಕ್ಕವರು ಸರಿಯಾಗಿ ಕೊಡುತ್ತಿದ್ದಾರೆಯೇ, ತೆಗೆದುಕೊಳ್ಳುವವರು ಸರಿಯಾಗಿ ತೆಗೆದುಕೊಳ್ಳುತ್ತಿದ್ದಾರೆಯೇ ಎಂದು ಯೋಚನೆ ಮಾಡಿದರೆ, ಈ ಒಂದು ಹುದ್ದೆಯಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಗೊತ್ತಾಗುತ್ತದೆ. ಕೆಳ ಮಟ್ಟದಲ್ಲಿ ಇರತಕ್ಕ ಅಧಿಕಾರಿಗಳು ಬಿಗಿಯಾದ ಕಾರ್ಯಕ್ರಮ ಹಾಕಿಕೊಂಡು, ರೈತರಿಗೆ ಸರಿಯಾದ ತೂಕ ಮತ್ತು ಅಳತೆಯನ್ನು ಕೊಡತಕ್ಕ ವ್ಯವಸ್ಥೆ

(ಶ್ರೀ ಟಿ. ಎಂ. ಮಂಜುನಾಥ್)

ಯನ್ನು ಮಾಡಿದ್ದರೆ ನಾನು ಒಪ್ಪುತ್ತಿದ್ದೆ. ಇನ್ನೂ ೧೦ ಜಾಯಿಂಟ್ ಕಂಟ್ರೋಲರ್‌ಗಳ ಹುದ್ದೆಯನ್ನು ನಿರ್ಮಾಣ ಮಾಡಿಕೊಂಡರೂ ಅದರಿಂದ ಒಳ್ಳೆಯದಾಗುತ್ತಿತ್ತು. ಆದರೆ ಇದರಿಂದ ಜನರಿಗೆ ಎಷ್ಟರಮಟ್ಟಿಗೆ ಒಳ್ಳೆಯದಾಗುತ್ತದೆ, ಎನ್ನುವುದನ್ನು ನಾವು ವಿಚಾರ ಮಾಡಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ ಅನೇಕ ಹಳ್ಳಿಗಳಲ್ಲಿ ಇವತ್ತು ಕೆ.ಜಿ.. ಲೀಟರ್‌ಗಳಂ ಇವುಗಳ ಹೆಸರೇ ಗೊತ್ತಿಲ್ಲ. ಹಳೆಯ ಶೇರುಗಳಿಂದಲೆ ಅಳತೆ ಮಾಡುತ್ತಿದ್ದಾರೆ. ಇದರಿಂದ ರೈತರ ಶೋಷಣೆ ನಡೆಯುತ್ತಿದೆ ಅಧಿಕಾರಿಗಳು ಎಷ್ಟರಮಟ್ಟಿಗೆ ಕರ್ತವ್ಯ ಲೋಪ ಮಾಡಿದ್ದಾರೆ, ಜನತೆಯನ್ನು ಶೋಷ ಮಾಡಿದ್ದಾರೆ, ಮತ್ತು ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಎನ್ನುವ ವಿಚಾರವನ್ನು ತಾವು ಯೋಚನೆ ಮಾಡಬೇಕು. ಯಾರೋ ಅಧಿಕಾರಿಯನ್ನು ಸೃಷ್ಟಿಮಾಡುವುದಕೋಸ್ಕರ ತಿದ್ದುಪಡಿ ಮಸೂದೆಯನ್ನು ತಂದಿರತಕ್ಕದ್ದು ಒಳಹ ತೋಚನೀಯ. ಇಷ್ಟೇ ಅಲ್ಲ. ತಾವು ವರ್ಷಕ್ಕೊಂದು ಸಲ ಇನ್‌ಸ್ಪೆಕ್ಷನ್ ಮಾಡುತ್ತೀರಿ. ಆದರೆ ಪ್ರಾಮಾಣಿಕರ ಹತ್ತಿರ ಒಂದು ವರ್ಷದಲ್ಲಿ ಏನಾದರೂ ಹೆಚ್ಚುಕಡಿಮೆಯಾಗಿರುತ್ತದೆಯೇ ? ಅಲ್ಲ ಇದಕ್ಕೆ ೮-೧೦ ರೂಪಾಯಿ ಛಾರ್ಜು ಮಾಡುವಿರಿ. ಈ ಸಂಬಂಧದಲ್ಲಿ ಒಂದು ಮಾರ್ಪಾಡು ಮಾಡಿ. ಒಂದು ರೆಗ್ಯುಲೇಟೆಡ್ ಮಾರ್ಕೆಟ್ ಯಾರ್ಡ್ ಇದೆ, ಅಧಿಕಾರಿಗಳಿಗೆ ಒಂದು ಸೂಚನೆ ಕೊಡಿ ಸಾಮಾನುಗಳನ್ನು ತೂಕ ಮತ್ತು ಅಳತೆಯ ಸಾಮಗ್ರಿಗಳನ್ನು ಕಛೇರಿಗೆ ತೆಗೆದುಕೊಂಡುಹೋದರೆ ವ್ಯಾಪಾರಸ್ಥರಿಗೆ ಹೆಚ್ಚು ಖರ್ಚು ಬರುವುದ ೧೦-೧೫ ರೂಪಾಯಿ ಛಾರ್ಜು ಮಾಡುವರು. ಇಂದಂ ಹಳೇ ಕಾಲದ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ, ಇದನ್ನೇಕೆ ಅಧಿಕಾರಿಗಳು ಗಮನಕ್ಕೆ ತಂದಿಲ್ಲ ? ಇದನ್ನು ನಾವು ಕಣ್ಣಾರೆ ನೋಡುತ್ತಿದ್ದೆವೆ. ಅಧಿಕಾರಿಗಳು ಸಂಭಾವನೆ ಸ್ವೀಕಾರ ಮಾಡುವರೇ ಹೊರತು ಸರಿಯಾದ ತೂಕ ಅಳತೆ ಇದೆಯೇ ಎಂದು ನೋಡುವುದಿಲ್ಲ ಎರಡು ಕ್ರಮ ಕೈಗೊಳ್ಳಬೇಕು. ವರ್ಷಕೊಂದು ಸಲ ಸರಿಯಾಗಿ ತನಿಖೆ ಮಾಡಬೇಕು ಮತ್ತು ಫೀಜು ನಿಗದಿ ಮಾಡಿರುವುದನ್ನು ಕಡಿಮೆ ಮಾಡಬೇಕು. ಸಾಧ್ಯವಾದ ಮಟ್ಟಿಗೆ ಹಳ್ಳಿಗಳಲ್ಲಿ ಸಂತೆಗಳಲ್ಲಿ ಪ್ರಚಾರ ಸರಿಯಾಗಿ ಮಾಡಿ ಇಂದು ಇಂಥ ಯೂನಿಟ್ ಮಾಡಿದ್ದೇವೆ ಇಂಥ ಅಳತೆ ಮತ್ತು ತೂಕದ ಬಟ್ಟು ಮುಂತಾದುವನ್ನು ಉಪಯೋಗಿಸಬೇಕು ಎಂದು ತಿಳಿಸಬೇಕು. ಹಾಗೆ ಮಾಡಿದರೆ ಮಾತ್ರ ಜಾಯಿಂಟ್ ಕಂಟ್ರೋಲರನ್ನು ನೇಮಕಮಾಡುವುದಂ ಸಾರ್ಥಕವಾಗುತ್ತದೆಯೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ ಎಂದು ಇಷ್ಟು ತಿಳಿಸಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಂಗಿಸುತ್ತೇನೆ.

(Mr Deputy Speaker in the chair)

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ತಂದಿರುವ ಬಿಲ್ಲನ್ನು ವಿರೋಧಿಸುತ್ತೇವೆ ಡೆಪ್ಯುಟಿ ರಿಜಿಸ್ಟ್ರಾರ ಗ್ರೇಡಿನಲ್ಲಿರುವ ಡೆಪ್ಯುಟಿ ಕಂಟ್ರೋಲರನ್ನು ಜಾಯಿಂಟ್ ಕಂಟ್ರೋಲರ್ ಮಾಡಬೇಕು. ಅವರಿಗೆ ಹೆಚ್ಚು ಅಧಿಕಾರ ಕೊಡಬೇಕು ಎಂದು ಈ ತಿದಂಪಡಿ ಮಸೂದೆಯನ್ನು ತಂದಿದ್ದಾರೆ. ಸಾರ್ವಜನಿಕರ ಹಿತ ದೃಷ್ಟಿಯಿಂದ ಮತ್ತು ಆಡಳಿತ ದೃಷ್ಟಿಯಿಂದ ಇದನ್ನು ತಂದಿರುವ ಬಗ್ಗೆ ಹಾಗೂ ಅನಾನುಕೂಲವೇನಿಲ್ಲ ಎಂಬುದನ್ನು ತಿಳಿಸಿಲ್ಲ. ಆಡಳಿತವು ಸುಸೂತ್ರವಾಗಿ ನಡೆಯುತ್ತಿದ್ದರೂ ಜಾಯಿಂಟ್ ಕಂಟ್ರೋಲರ ಹುದ್ದೆಯನ್ನು ನಿರ್ಮಿಸಿದ್ದಾರೆ. ಇದಕ್ಕೆ ಅಗತ್ಯವಿತ್ತೇ? ದಕ್ಷತೆ ಇದರಿಂದ ಹೆಚ್ಚುವುದೇ ? ಜಾಯಿಂಟ್ ಕಂಟ್ರೋಲರ ಹುದ್ದೆಯನ್ನು ಸೃಷ್ಟಿಸಿ ತಮಗೆ ಬೇಕಾದ ಯಾವುದೋ ವ್ಯಕ್ತಿಗೆ ಅದನ್ನು ಕೊಡಬೇಕೆಂದಂ ಹೀಗೆ ಮಾಡಿದ್ದಾರೆ ಎಂಬ ಸಂದೇಹ ಬರುತ್ತಿದೆ. ಈಗಿರುವ ಡೆಪ್ಯೂಟಿ ಕಂಟ್ರೋಲರೇ ಸಮರ್ಪಕವಾಗಿ ಇರುವ ಕೆಲಸವನ್ನು ಮಾಡಿಕೊಂಡು ಹೋಗಲು ಕಾನೂನಿನಲ್ಲಿ ಅವಕಾಶವಿರುವಾಗ ಜಾಯಿಂಟ್ ಕಂಟ್ರೋಲರ ಅವಶ್ಯಕತೆಯೇನಿತ್ತು ? ಇದು ಪ್ರಾಮಾಣಿಕವಾದ ಕೆಲಸವಲ್ಲ, ಬೇಕಾದವರಿಗೆ ಸಹಾಯಮಾಡುವ ಕೆಲಸಮಾಡಿದ್ದಾರೆ ಎಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಮಂಜುನಾಥರವರು ಹೇಳಿದಂತೆ ದಕ್ಷತೆ, ಪ್ರಾಮಾಣಿಕತೆ ಅಧಿಕಾರಿಗಳಲ್ಲಿ ಕಡಿಮೆಯಾಗುತ್ತಿದೆ. ವರ್ಷಕೊಂದು ಸಲ ತನಿಖೆ ಮಾಡುವಾಗ ಕೆಲವರ ಮೇಲೆ ಕ್ರಮ ತೆಗೆದುಕೊಳ್ಳುವುದು ಕೆಲವರನ್ನು ಕೈ ಬಿಡುವುದಂ ಈ ದೃಶ್ಯ ನಿತ್ಯವೂ ಕಂಡುಬರುತ್ತದೆ. ಸಾರ್ವಜನಿಕರ ಅನುಕೂಲಕ್ಕಾಗಿ, ದಕ್ಷತೆಯನ್ನು ಹೆಚ್ಚಿಸುವುದಕ್ಕಾಗಿ ತಿದ್ದುಪಡಿ ಮಸೂದೆ ತಂದಿದ್ದರೆ ವಿರೋಧಿಸುತ್ತಿರಲಿಲ್ಲ. ಆದರೆ ಉದ್ದೇಶ ಸರಿಯಾಗಿಲ್ಲ ತಿಮ್ಮಪ್ಪನವರು ಹೇಳಿದ ಹಾಗೆ ಬೇಕಾದವರಿಗೆ ಹುದ್ದೆ ಸೃಷ್ಟಿಮಾಡಲು, ಸಿಬ್ಬಂದಿ ಸೃಷ್ಟಿಸಲು ಇದನ್ನು ತಂದಿದ್ದಾರೆ. ದುರ್ಬಿಕ್ಷದ ಕಾಲದಲ್ಲಿ ಇಂಥಾದ್ದಕ್ಕಾಗಿ ಹಣ ಖರ್ಚುಮಾಡುವುದಂ ಸಾರ್ವಜನಿಕರ ಹಣ ವ್ಯರ್ಥ ಮಾಡುವುದಂ ಸರಿಯಲ್ಲ ಇದೊಂದು ಕಸಬಾಗಿದೆ. ಆದುದರಿಂದ ಈ ಕಾನೂನನ್ನು ವಾಪಸ್ಸು ಪಡೆಯು ಬೇಕೆಂದು ಹೇಳಬೇಕಾಗಿದೆ ಇದರಿಂದ ಅನುಕೂಲವಾಗುವುದೇನು ಇಲ್ಲ. ಆದುದರಿಂದ ನಾನು ಈ ಮಸೂದೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ. ಇಷ್ಟು ಹೇಳಿ ಮಾತನಾಡಲು ಅವಕಾಶವಿತ್ತ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ಸಿ. ಎನ್. ಪಾಟೀಲ್.—ಈ ಹುದ್ದೆಯನ್ನೇನು ನಾವು ಹೊಸದಾಗಿ ಕ್ರಿಯೇಟ್ ಮಾಡಿದ್ದೇವೆ ಇದರಿಂದ ಏನೂ ಕಮಿಟ್‌ಮೆಂಟ್ ಇಲ್ಲ. ರ್ಯಾಶಿಗೆ ರಿಂದೇನು ಖರ್ಚು ಮಾಡುತ್ತಿದ್ದೆವೋ ಅಷ್ಟನ್ನೇ ಖರ್ಚು ಮಾಡುತ್ತಿದ್ದೇವೆ. ಈಗ ಹೆಚ್ಚು ಖರ್ಚಿನು ಇಲ್ಲ. ಜಾಯಿಂಟ್ ಕಂಟ್ರೋಲರ್ ಹಿಂದೆ ಇರಲಿಲ್ಲ, ಪ್ರತಿಯೊಂದು ಡಿವಿಜನ್ಸಿಗೂ ಡೆಪ್ಯುಟಿ ಕಂಟ್ರೆಲರ್ ಇದ್ದರು. ಇದುವರೆಗೆ ರಿಜಿಸ್ಟ್ರಾರರೇ ಜಾಯಿಂಟ್ ಕಂಟ್ರೋಲರ್ ಮುಂದೆ ಮಾಡುವ ಕೆಲಸವನ್ನು ನೋಡಿಕೊಳ್ಳುತ್ತಿದ್ದರು, ಈಗ ಅವರಿಗೆ ಹೆಚ್ಚು ಕೆಲಸವಾಗಿರುವುದರಿಂದ, ಸ್ಟೇಟ್ ಲೆವಲ್‌ನಲ್ಲಿ ಒಬ್ಬ ಜವಾಬ್ದಾರಿ ಅಧೀಸರನ್ನು ನೇಮಕ ಮಾಡ ಬೇಕಾಗಿದೆ. ಈಗ ಒಬ್ಬ ಡೆಪ್ಯುಟಿ ಕಂಟ್ರೊಲರ್ ಹುದ್ದೆಯನ್ನು ಅಪ್‌ಗ್ರೇಡ್ ಮಾಡುತ್ತಿದ್ದೆವೆ. ಸ್ಟೇಟ್ ಲೆವೆಲಿನಲ್ಲಿ ಅಪೀಲು ಕೆಲಸಗಳನ್ನು ಇತ್ಯರ್ಥಮಾಡಲು ಜಾಯಿಂಟ್ ರಿಜಿಸ್ಟ್ರಾರರ ಅವಶ್ಯಕತೆಯಿತು ಅದಕ್ಕಾಗಿ ತಿದ್ದುಪಡಿ ಮಾಡಿದೆ. ಒಬ್ಬ ಡೆಪ್ಯುಟಿ ಕಂಟ್ರೋಲರನ್ನು ಜಾಯಿಂಟ್ ರಿಜಿಸ್ಟ್ರಾರ್ ಮಾಡ ತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ ನನಗೆ ಮಾನ್ಯ ಸಚಿವರಿಂದ ಒಂದು ಕ್ಲಾರಿಫಿಕೇಷನ್ಸ್ ಜೇಕಾಗಿದೆ .....

ಉಪಾಧ್ಯಕ್ಷರು.—ಈಗ ಮಂತ್ರಿಗಳು ಮಾತನಾಡುತ್ತಿದ್ದಾರೆ, ಆದು ಮುಗಿದ ನಂತರ ಮಾನ್ಯ ಸದಸ್ಯರು ಕೇಳಬಹುದು.

ಶ್ರೀ ಸಿ. ಎನ್. ಪಾಟೀಲ್.—ಈಗ ಅಸಿಸ್ಟೆಂಟ್ ಕಂಟ್ರೋಲರು ತೀರ್ಮಾನ ಕೊಟ್ಟ ಕೇಸುಗಳ ಅಪೀಲನ್ನು ಡೆಪ್ಯುಟಿ ಕಂಟ್ರೋಲರು ಹಿಯರ್ ಮಾಡಬೇಕಾಗಿದೆ. ಅದಕ್ಕಾಗಿ ಡೆಪ್ಯುಟಿ ಕಂಟ್ರೊಲರ ಹುದ್ದೆಯನ್ನು ಜಾಯಿಂಟ್ ಕಂಟ್ರೋಲರ ಹುದ್ದೆಗೆ ಏರಿಸಲಾಯಿತು. ಅವರಿಗೆ ಇಲ್ಲಿಯವರೆಗೆ ಸ್ಪಾಟ್ಯಚು ಟೆರಿ ಅಧಿಕಾರವಿರಲಿಲ್ಲ. ಅದಕ್ಕಾಗಿ ಆಪ್‌ಗ್ರೇಡ್ ಮಾಡಬೇಕಾಯಿತು. ಇದನ್ನು ರ್ಯಾಶಿಗೆ ರಲ್ಲೇ ಮಾಡ ಲಾಯಿತು. ಇತ್ತೀಚೆಗೆ ಜಾಯಿಂಟ್ ಕಂಟ್ರೋಲರಿಗೂ ಕೆಲಸಗಳು ಹೆಚ್ಚಾಗುತ್ತಿವೆ. ಅದಕ್ಕಾಗಿ ಇದನ್ನು ಮಾಡಲಾಯಿತೇ ವಿನಾ ಮಾನ್ಯ ಕೃಷ್ಣಪ್ಪನವರು ಹೇಳಿದಂತೆ ಯಾವುದೋ ಒಬ್ಬ ವ್ಯಕ್ತಿಗೆ ಅನುಕೂಲ ಮಾಡುವುದಕ್ಕಾಗಿ ಇದನ್ನು ಮಾಡುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಇರತಕ್ಕ ಆಕ್ಟಿನಲ್ಲಿ ಡಿವಿಜನ್ನಿಗೆ ಒಬ್ಬೊಬ್ಬರು ಡೆಪ್ಯುಟಿ ಕಂಟ್ರೊಲರಿದ್ದಾರೆ. ಅದಕ್ಕಾಗಿ ಸ್ಟೇಟ್ ಲೆವಲ್‌ನಲ್ಲಿ ಒಬ್ಬರು ಕಂಟ್ರೋಲರಿಗೆ ಸಹಾಯ ಮಾಡಲು ಜಾಯಿಂಟ್ ಕಂಟ್ರೊಲರು ಇರಬೇಕೆಂದು ಹೇಳಿದರು. ಇದೊಂದು ಹೊಸ ಹುದ್ದೆಯಾಗಿದೆ. ಆದರೆ ಆಕ್ಟಿನಲ್ಲಿ ಡೆಪ್ಯುಟ ಕಂಟ್ರೊಲರ ವತ್ತು ರಿಜಿಸ್ಟ್ರಾರರ ಕರ್ತವ್ಯ ಕೆಲಸಗಳನ್ನು ಡಿಫೈನ್ ಮಾಡಿದಾರೆ, ಆದರೆ ಈ ಎರ ಡಕ್ಕೂ ಮಧ್ಯೆ ಇರತಕ್ಕ ಜಾಯಿಂಟ್ ಕಂಟ್ರೋಲರ ಕರ್ತವ್ಯಗಳೇನು ಎಂಬುದನ್ನು ಡಿಫೈನ್ ಮಾಡಿಲ್ಲ. ಅಂದರೆ ಇವರಿಗೆ ರಿಜಿಸ್ಟ್ರರ್ ಏನು ಕೆಲಸಗಳನ್ನು ಕರ್ತವ್ಯಗಳನು ಡೆಲಿಗೇಟ್ ಮಾಡುತ್ತಾರೋ ಅಷ್ಟನ್ನೂ ವ ಮಾತ್ರ ಮಾಡಬಹುದು. ಆದರೆ ಆಕ್ಟಿನಲ್ಲಿ ಇವರ ಕರ್ತವ್ಯಗಳನ್ನು ಏಕೆ ಡಿಫೈನ್ ಮಾಡಲಿಲ್ಲ ?

ಶ್ರೀ ಸಿ. ಎನ್. ಪಾಟೀಲ್.—ಅದಕ್ಕಾಗಿ ನಾನು ಎಲ್ಲವನ್ನೂ ಮೊದಲೇ ತಿಳಿಸಿದ್ದೇನೆ. ಮತ್ತು ಈ ಬಿಲ್ಲಿನಲ್ಲೂ ಎಲ್ಲವನ್ನೂ ವಿವರವಾಗಿ ತಿಳಿಸಿದ್ದೇನೆ.

SRI KAGODU THIMMAPPA.—The functions of the Registrar and the Deputy Controller have been defined in the Act. but the functions of the Joint Controller have not been defined in the Bill I feel that it is advisable to define his functions otherwise he cannot function independently.

MR. DEPUTY SPEAKER —The hon. Minister for Co-operation is going to introduce an amendment to the Bill. While introducing the amendment, he would clarify the point which the hon. member has raised.

The question is ;

"That the Karnataka Weights and Measures (Enforcement) (Amendment) Bill, 1974, be taken into consideration."

The motion was adopted.

Clause-2

MR. DEPUTY SPEAKER.—Since there are no amendments to Clause 2 of the Bill, I shall put the clause to the vote of the House.

The question is;

"That clause 2 do stand part of the Bill."

The motion was adopted.

Clause 2 was added to the Bill.

Clause-3

MR. DEPUTY SPEAKER.—There is an amendment to clause 3 of the Bill by the Hon. Minister for Co-operation. He may kindly move the amendment.

SRI. C.N. PATIL.—I beg to move;

"That in column (1) of the Table, in item (ii) delete the words

"Deputy Controller or"

In columns (1) and (2) of the Table after the items (ii) add the following item-

(iii) Deputy Controller Joint Controller"

MR. DEPUTY SPEAKER.—Amendment moved.

"That in column (1) of the Table, in item

(ii) delete the words

"Deputy Controller or"

In columns (1) and (2) of the Table after the items (ii) add the following item-

(iii) Deputy Controller Joint Controller."

ಶ್ರೀ ಸಿ.ಎನ್. ಪಾಟೀಲ್.—ಇಲ್ಲಿ ಅಸಿಸ್ಟೆಂಟ್ ಕಂಟ್ರೋಲರು ತಿರ್ಮಾನ ಮಾಡಿದ ಕೇಸುಗಳ ಅಪೀಲು ಡೆಪ್ಯುಟಿ ಕಂಟ್ರೋಲರಿಗೆ ಹೋಗುತ್ತದೆ. ಡೆಪ್ಯುಟಿ ಕಂಟ್ರೋಲರು ಕೊಡತಕ್ಕ ತೀರ್ಪಿನ ಮೇಲೆ ಅಪೀಲು ಜಾಯಿಂಟ್ ಕಂಟ್ರೋಲರಿಗೆ ಹೋಗುತ್ತದೆ, ಕಂಟ್ರೋಲರ ತೀರ್ಪಿನ ಮೇಲೆ ಅಪೀಲು ಸರ್ಕಾರಕ್ಕೆ ಹೋಗುತ್ತದೆ. ಆದರೆ ಇಲ್ಲಿ ಆ ಡೆಪ್ಯುಟಿ ಕಂಟ್ರೋಲರ್ ಮತ್ತು ಜಾಯಿಂಟ್ ಕಂಟ್ರೋಲರಿಗೆ ಸರಿಸಮಾನವಾದ ಸ್ಥಾನಗಳನ್ನು ತೋರಿಸಿದ್ದರು. ಅದು ಸರಿಯಲ್ಲ. ಅದಕ್ಕೆ ಈ ತಿದ್ದುಪಡಿಯನ್ನು ತರಲಾಗಿದೆ.

SRI. KAGODU THIMMAPPA.—The functions of the Joint Controller who comes in between Registrar and the Deputy Controller are not defined in the Act. In the absence of these being defined, he will be discharging the delegated powers.

SRI. C.N. PATIL.—Some of the powers of the Registrar are going to be delegated to the Joint Controller of Weights and measures. These powers are quite clear.

SRI. H.D. DEVE GOWDA.—You must define those powers in the Amending Bill itself. We cannot draw an inference.

SRI. KAGODU THIMMAPPA.—If you want to see that this amendment is made purposeful, then you must bring an amendment to the functions of the Joint Controller. That would then become a meaningful Bill.

MR. DEPUTY SPEAKER.—The question is:

"That in column (1) of the Table, in item

(ii) delete the words

"Deputy Controller or"

In columus (1) and (2) of the Table after the items (ii) add the following item–

(iii) Deputy Controller Joint Controller."

The amendment was adopted

MR. DEPUTY SPEAKER.—The question is:

"That clause 3, as amended do stand part of the Bill."

The motion was adopted.

Clause 3, as amended, was added to the Bill.

Clause–4

MR. DEPUTY SPEAKER.—The question is:

"That clause 4 do stand part of the Bill."

The motion was adopted.

Clause–1 etc.

MR. DEPUTY SPEAKER.—The question is:

"That clause 1, the long Title, the Preamble and the Enacting formula do stand part of the Bill."

The motion was adopted.

Clause 1, the long Title the Preamble and the Enacting formula were added to the Bill.

Motion to Pass

SRI. C.N. PATIL.—(Minister for Co-operation).—I beg to move;

"That the Karnataka Weights and Measures (Enforcement) (Amendment) Bill. 1974, as amended, be passed."

MR. DEPUTY SPEAKER.—The question is:

"That the Karnataka Weights and Measures (Enforcement) (Amendment) Bill, 1974. as amended, be passed."

The motion was adopted.

The Bill was passed as amended

THE KARNATAKA SOCIETIES REGISTRATION (AMENDMENT) BILL, 1974. MOTION TO CONSIDER.

SRI. N. HUTCHMASTHY GOWDA (Minister for Revenue).—I beg to move:

"That the Karnataka Societies Registration (Amendment) Bill, 1974 be taken into consideration."

MR. DEPUTY SPEAKER.—The question is:

"That the Karnataka Societies Registration (Amendment) Bill, 1974 be taken into consideration."

4-00 P.M.

† ಶ್ರೀ ಎನ್. ಹುಚ್ಚಮಾಸ್ತಿಗೌಡ —ಮಾನ್ಯ ಅಧ್ಯಕ್ಷರೇ, ಈಗಿರತಕ್ಕ ರೀತಿಯಲ್ಲಿ ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್‌ನಲ್ಲಿ ಬಹುಶಃ ಕೆಲವು ಸೊಸೈಟಿಗಳಿಗೆ ಡಿಸೆಂಬರ್ ಆಖೈರ್ ಎಂಬುದಾಗಿ ಇರುತ್ತದೆ. ಕೆಲವರು ಜನವರಿಯಿಂದ ಡಿಸೆಂಬರ್‌ವರೆಗೆ ಎಂದೂ, ಮತ್ತೆ ಕೆಲವರು ಜೂನ್‌ನಿಂದ ಜುಲೈವರೆಗೆ ಎಂಬುದಾಗಿ ಕ್ಯಾಲೆಂಡರ್ ಇಯರ್ ಇಟ್ಟುಕೊಂಡಿರುತ್ತಾರೆ ಈ ರೀತಿಯಾಗಿ ವ್ಯತ್ಯಾಸಗಳು ಇವೆ. ಅದಕ್ಕಾಗಿ ಎಲ್ಲಾ ಕಡೆಗಳಲ್ಲಿಯೂ ಒಂದೇ ವಿಧವಾದ ಕಾಲವನ್ನು ಗೊತ್ತುಮಾಡುವುದಕ್ಕೆ ಬದಲಾಗಿ, ವರ್ಷದ ೧೨ ತಿಂಗಳುಗಳಲ್ಲಿ ಯಾವುದಾದರೂ ಒಂದು ಅವಧಿಯನ್ನು ಗೊತ್ತುಮಾಡಿಕೊಂಡರೆ ಅವರಿಗೆ ಅನುಕೂಲವಾಗಿರುತ್ತದೆ. ಅಲ್ಲಿನ ಪರಿಸ್ಥಿತಿ, ವಿದ್ಯಮಾನಗಳನ್ನು ನೋಡಿಕೊಂಡು ಮಾಡಲಿ ಎಂಬ ಉದ್ದೇಶದಿಂದ ಮೊದಲನೆಯ ತಿದ್ದುಪಡಿಯನ್ನು ತಂದಿದ್ದೇನೆ.

ಇನ್ನು ಸೆಕ್ಷನ್ (೨) (ಎಫ್) ಎಂಬುದಾಗಿ ಹೊಸದಾಗಿ ಸೇರಿಸಲಾಗಿದೆ. ವರ್ಷದ ಯಾವುದೇ ಭಾಗದಲ್ಲಿ ಅವರು ಆ ವರ್ಷವನ್ನು ಗೊತ್ತುಮಾಡಬಹುದು. ಅಯಾ ಸೊಸೈಟಿಗಳ ಅನುಕೂಲಕ್ಕೆ ಎಂಬುದಾಗಿ ಈ ಒಂದು ತಿದ್ದುಪಡಿ. ಎರಡನೆಯ ತಿದ್ದುಪಡಿ, ಹಣಕಾಸಿನ ಪರಿಸ್ಥಿತಿಯನ್ನು ಸೊಸೈಟಿಗಳನ್ನು ವೃದ್ಧಿಮಾಡಿಕೊಳ್ಳುವುದಕ್ಕೆ ಈ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ೯ನೇ ಸೆಕ್ಷನ್ನಿನಲ್ಲಿ ಮೆಮೋರ್ಯಾಂಡಂ ಆಫ್ ಅಸೋಸಿಯೇಷನ್ನಿನಲ್ಲಿ ಏನಾದರೂ ಬದಲಾವಣೆ ಮಾಡಿಕೊಳ್ಳುವ ಸಂದರ್ಭದಲ್ಲಿ ಈಗ ೧೦ ರೂಪಾಯಿಗಳ ರುಸುಂ ಗೊತ್ತುಮಾಡಿರುವುದಿದೆ. ಅದಕ್ಕೆ ಬದಲಾಗಿ ಸರ್ಕಾರದ ದೃಷ್ಟಿಯಿಂದ ೨೦ ರೂಪಾಯಿಗಳು ಎಂಬುದಾಗಿ ಹೇಳಿ ಸೇರಿಸಿದೆ. ಜೇಂಜ್ ಆಫ್ ನೇಮ್ಸ್ ರೂಲ್ಸ್, ಅಂಡ್ ರೆಗ್ಯುಲೇಷನ್ಸ್ ಇವುಗಳಂ ೧೨ನೇ ಸೆಕ್ಷನ್ನಿನಲ್ಲಿದೆ. ಇದಕ್ಕೆ ೨ ರೂಪಾಯಿಗಳ ರುಸುಂ ಗೊತ್ತುಮಾಡಿದೆ. ಅದಕ್ಕೆ ಬದಲಾಗಿ ೧೨ ರೂಪಾಯಿಗಳೆಂದು ತಿದ್ದುಪಡಿಮಾಡಲಾಗಿದೆ. ಇನ್ನು ೧೧ನೇ ಸೆಕ್ಷನ್ನಿನಲ್ಲಿ ಕ್ಯಾಲೆಂಡರ್ ಇಯರ್ ಎಂದು ಇದ್ದುದಕ್ಕೆ ಮೊದಲನೆಯ ತಿದ್ದುಪಡಿ ತಂದಾಗ್ಗೆ ಅದಕ್ಕೆ ವಿರೋಧವಾದುದರಿಂದ ಕಾನ್ಸಿಕ್ವೆನ್ಷಿಯಲ್ಲಾಗಿ ಅಮೆಂಡ್‌ಮೆಂಟ್ ತಂದು ಕ್ಯಾಲೆಂಡರ್ ಇಯರ್ ಎಂಬುದನ್ನು ತೆಗೆಯಬೇಕೆಂದು ಮಾಡಿದೆ, ಇನ್ನೊಂದು ತಿದ್ದುಪಡಿ ಅದೇ ರೀತಿಯಲ್ಲಿ ೧೨ನೇ ಸೆಕ್ಷನ್ನಿನಲ್ಲಿ ಕ್ಯಾಲೆಂಡರ್ ಎಂಬುದಾಗಿ ಎರಡು ಕಡೆಗಳಲ್ಲಿದೆ. ಆ ಪದಗಳನ್ನು ತೆಗೆಯಬೇಕೆಂದು ಒಂದು ತಿದ್ದುಪಡಿ. ಆಮೇಲೆ ೧೨ನೇ ಸೆಕ್ಷನ್ ಆಖೈರಿನಲ್ಲಿ ಹೊಸದಾಗಿ ೩ನೇ ಸಬ್ ಕ್ಲಾಜ್ ಒಂದನ್ನು ಸೇರಿಸಿದೆ. ಅದು ಈ ರೀತಿ ಇದೆ.